Total No. of Questions : 24 ]

Total No. of Printed Pages : 16 ]

**Code No. 30**

**March, 2011**

# ACCOUNTANCY

( Kannada and English Versions )

Time : 3 Hours 15 Minutes ] [ Max. Marks : 100

( Kannada Version )

## ಭಾಗ – A

ಈ ಕೆಳಗಿನವುಗಳಲ್ಲಿ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು : $8 \times 2 = 16$

1. ವ್ಯವಹಾರ ಸ್ಥಿತಿ ಪತ್ರಿಕೆ ಮತ್ತು ಅಢಾವೆ ಪತ್ರಿಕೆ ಇವುಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

2. ಪಾಲುಗಾರಿಕೆ ಒಪ್ಪಂದ ಎಂದರೇನು ?

3. ಪಾಲುಗಾರಿಕೆ ಸಂಸ್ಥೆಗೆ ಹೊಸ ಪಾಲುಗಾರನು ಸೇರ್ಪಡೆಯಾದಾಗ ಪುನರ್‌ಮೌಲ್ಯ ಖಾತೆಯಲ್ಲಿ ಬರುವ ಲಾಭದ ವಿತರಣೆಗೆ ಒಂದು ದಾಖಲೆಯನ್ನು ಕೊಡಿ.

4. ವಿಲೇವಾರಿ ಖಾತೆಯನ್ನು ಏಕೆ ತಯಾರಿಸುತ್ತೀರಿ ?

5. ಕರೆಗಳ ಮುಂಗಡ ಎಂದರೇನು ?

6. ಸ್ಥಿರ ಆಸ್ತಿಗಳ ತಲೆಬರಹದಲ್ಲಿ ತೋರಿಸುವ ಯಾವುದಾದರೂ ಎರಡು ಆಸ್ತಿಗಳನ್ನು ಹೆಸರಿಸಿ.

7. ಸವಕಳಿ ಎಂದರೇನು ?

8. ಬಂಡವಾಳ ವೆಚ್ಚದ ಅರ್ಥವನ್ನು ಕೊಡಿ.

9. ವೇತನ ಪಟ್ಟಿ (ಪೇರೋಲ್) ಲೆಕ್ಕ ಮಾಡುವಿಕೆ ಎಂದರೇನು ?

10. ದತ್ತಾಂಶ ನಿರ್ವಹಣಾ ಪದ್ಧತಿ ಎಂದರೇನು ?

## ಭಾಗ – B

ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು:
$3 \times 6 = 18$

11. ದಿನಾಂಕ 01. 01. 2010 ರಂದು ಕೃಷ್ಣ ಮತ್ತು ಬಲರಾಮ ಪಾಲುಗಾರಿಕೆ ಸಂಸ್ಥೆಗೆ ಸೇರಿದ್ದು ಕ್ರಮವಾಗಿ ರೂ. 1,00,000 ಮತ್ತು ರೂ. 75,000 ಬಂಡವಾಳವನ್ನು ತೊಡಗಿಸಿರುತ್ತಾರೆ ಮತ್ತು ಲಾಭ-ನಷ್ಟವನ್ನು 3 : 2 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಬಲರಾಮನಿಗೆ ರೂ. 20,000 ವಾರ್ಷಿಕ ಸಂಬಳವನ್ನು ಅನುಮತಿಸಿದೆ. ಬಂಡವಾಳದ ಮೇಲೆ ಶೇಕಡಾ 5 ರಷ್ಟು ಹಾಗೂ ಸ್ವಂತ ವೆಚ್ಚದ ಮೇಲೆ ಶೇಕಡಾ 6 ರಷ್ಟು ಬಡ್ಡಿಯನ್ನು ಆಕರಿಸಲಾಗಿದೆ. ಆ ವರ್ಷದಲ್ಲಿ ಕೃಷ್ಣ ಸ್ವಂತ ವೆಚ್ಚಕ್ಕಾಗಿ ರೂ. 15,000 ಮತ್ತು ಬಲರಾಮ ರೂ. 18,000 ಗಳನ್ನು ಉಪಯೋಗಿಸಿರುತ್ತಾರೆ. ಅದರ ಮೇಲೆ ಕ್ರಮವಾಗಿ ರೂ. 350 ಮತ್ತು ರೂ. 250 ಬಡ್ಡಿ ವಿಧಿಸಬೇಕು. ಮೇಲ್ಕಾಣಿಸಿದ ಬಾಬುಗಳನ್ನು ಹೊಂದಾಣಿಕೆ ಮಾಡುವ ಪೂರ್ವದಲ್ಲಿ ಆ ವರ್ಷದ ಲಾಭವು ರೂ. 52,900 ಆಗಿರುತ್ತದೆ.

    ಲಾಭ-ನಷ್ಟ ವಿನಿಯೋಗ ಖಾತೆಯನ್ನು ತಯಾರಿಸಿ.

12. ಉಮ ಮತ್ತು ಸುಮ ಪಾಲುಗಾರರಾಗಿದ್ದು 3 : 2 ರ ಪ್ರಮಾಣದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅವರು ರಶ್ಮಿಯನ್ನು ಹೊಸ ಪಾಲುಗಾರಳಾಗಿ ಸೇರಿಸಿಕೊಳ್ಳಲು ಒಪ್ಪಿರುತ್ತಾರೆ. ಭವಿಷ್ಯತ್ತಿನಲ್ಲಿ ಎಲ್ಲಾ ಪಾಲುಗಾರರು ಅನುಕ್ರಮವಾಗಿ 8 : 7 : 5 ರ ಪ್ರಮಾಣದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಾರೆ.

    ಹಳೆ ಪಾಲುಗಾರರ ತ್ಯಾಗದ ಪ್ರಮಾಣವನ್ನು ಕಂಡುಹಿಡಿಯಿರಿ.

13. ಕರಿಯ, ಬಿಳಿಯ ಮತ್ತು ಕೆಂಪ ಇವರು ಪಾಲುಗಾರರಾಗಿದ್ದು ಲಾಭ-ನಷ್ಟಗಳನ್ನು 2 : 2 : 1 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಅವರ ಅಢಾವೆ ಪತ್ರಿಕೆ ದಿನಾಂಕ 31. 12. 2009 ರಂದು ಈ ಕೆಳಗಿನಂತಿದೆ :

**ದಿನಾಂಕ 31. 12. 2009ರ ಅಢಾವೆ ಪತ್ರಿಕೆ**

| *ಹೊಣೆಗಾರಿಕೆಗಳು* | | *ರೂ.* | *ಆಸ್ತಿಗಳು* | *ರೂ.* |
|---|---|---|---|---|
| ಸಾಹುಕಾರರು | | 60,000 | ನಗದು | 15,000 |
| ಕೊಡತಕ್ಕ ಹುಂಡಿ | | 30,000 | ದಾಸ್ತಾನು | 45,000 |
| ಕಾಯ್ದಿಟ್ಟ ನಿಧಿ | | 60,000 | ಸಾಲುಗಾರರು | 60,000 |
| *ಬಂಡವಾಳಗಳು :* | | | ಪೀಠೋಪಕರಣ | 30,000 |
| ಕರಿಯ | 60,000 | | ಕಟ್ಟಡಗಳು | 1,50,000 |
| ಬಿಳಿಯ | 60,000 | | | |
| ಕೆಂಪ | 30,000 | 1,50,000 | | |
| | | **3,00,000** | | **3,00,000** |

ದಿನಾಂಕ 01. 07. 2010 ರಂದು ಕರಿಯ ಮೃತರಾದನು. ಅವರ ವಾರಸುದಾರರು ಈ ಕೆಳಗಿನವುಗಳನ್ನು ಪಡೆಯಬಹುದು :

a) ಮೃತನಾದ ದಿನಾಂಕದಂದು ಇದ್ದ ಅವರ ಬಂಡವಾಳ.

b) ಅವರ ಭಾಗದ ಕಾಯ್ದಿಟ್ಟ ನಿಧಿ.

c) ಅವರ ಭಾಗದ ಕೀರ್ತಿಮೌಲ್ಯವು ಸಂಸ್ಥೆಯ ಕೀರ್ತಿಮೌಲ್ಯ ರೂ. 1,50,000 ಕ್ಕೆ ಮೌಲ್ಯ ಮಾಡಲಾಗಿದೆ.

d) ಬಂಡವಾಳದ ಮೇಲೆ ವಾರ್ಷಿಕ ಬಡ್ಡಿ ಶೇಕಡ 9.

e) ಮೃತನಾದ ದಿನಾಂಕದವರೆಗೆ ಗಳಿಸಿದ ಲಾಭದಲ್ಲಿ ಅವರ ಪಾಲನ್ನು ಕಳೆದ ವರ್ಷದ ಲಾಭದ ಆಧಾರದ ಮೇಲೆ ಲೆಕ್ಕ ಮಾಡಬೇಕು. ಕಳೆದ ವರ್ಷದ ( 2009 ) ಲಾಭ ರೂ. 75,000.

ಕರಿಯನ ಬಂಡವಾಳ ಖಾತೆಯನ್ನು ತಯಾರಿಸಿ.

14. ದಿನಾಂಕ 01. 01. 2008 ರಂದು ಬಾಲಾಜಿ ಕಂಪನಿ ನಿಯಮಿತ, ಇದರ ನಿರ್ದೇಶಕರು ರೂ. 100 ಮೌಲ್ಯದ 600 ಈಕ್ವಿಟಿ ಶೇರುಗಳನ್ನು, ಅವುಗಳ ಮೇಲೆ ಪ್ರತಿ ಶೇರಿನ ರೂ. 25 ರಂತೆ ಪ್ರಥಮ ಕರೆಯ ಮತ್ತು ರೂ. 15 ರಂತೆ ಅಂತಿಮ ಕರೆಯ ಹಣ ಪಾವತಿಯಾಗದ ಕಾರಣ ಮುಟ್ಟುಗೋಲು ಹಾಕಿದರು.

ದಿನಾಂಕ 01. 02. 2008 ರಂದು ಅವರು ಆ ಶೇರುಗಳನ್ನು ಪ್ರತಿ ಶೇರಿಗೆ ರೂ. 88 ರಂತೆ ಪೂರ್ಣ ಸಂದಾಯವೆಂದು ಮರುಬಿಡುಗಡೆ ಮಾಡಿದರು.

ಅವಶ್ಯವಿರುವ ರೋಜು ದಾಖಲೆಗಳನ್ನು ಬರೆಯಿರಿ.

15. ಮ್ಯಾನ್ಯುಯಲ್ (ಕೈಯಿಂದ ಮಾಡಿದ) ಲೆಕ್ಕ ಪದ್ಧತಿಗೂ ಮತ್ತು ಗಣಕೀಕೃತ ಲೆಕ್ಕ ಪದ್ಧತಿಗೂ ಇರುವ ಯಾವುದಾದರೂ ಆರು ವ್ಯತ್ಯಾಸಗಳನ್ನು ಬರೆಯಿರಿ.

## ಭಾಗ – C

ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು :
$4 \times 14 = 56$

16. ಶ್ರೀ ಭರತ್ ತಮ್ಮ ಲೆಕ್ಕ ಪುಸ್ತಕಗಳನ್ನು ಏಕ ನಮೂದು ಪದ್ಧತಿಯಲ್ಲಿ ಇಟ್ಟಿರುತ್ತಾರೆ. ಅವರು ಈ ಕೆಳಗಿನ ಮಾಹಿತಿಗಳನ್ನು ಒದಗಿಸಿರುತ್ತಾರೆ :

| *ವಿವರಗಳು* | **01. 01. 2009** *ರೂ.* | **31. 12. 2009** *ರೂ.* |
|---|---|---|
| ನಗದು | 10,000 | 16,000 |
| ಬ್ಯಾಂಕ್ ಮೀರೆಳೆತ ( BOD ) | 20,000 | 14,000 |
| ಬರತಕ್ಕ ಹುಂಡಿಗಳು | 16,000 | 20,000 |
| ಸಾಲಗಾರರು | 30,000 | 40,000 |
| ದಾಸ್ತಾನು | 24,000 | 28,000 |
| ಪೀಠೋಪಕರಣ | 20,000 | 20,000 |
| ಯಂತ್ರೋಪಕರಣ | 30,000 | 30,000 |
| ಕೊಡತಕ್ಕ ಹುಂಡಿ | 6,000 | 10,000 |
| ಸಾಹುಕಾರರು | 14,000 | 16,000 |
| ಕಟ್ಟಡಗಳು | 50,000 | 50,000 |

ಆ ವರ್ಷದಲ್ಲಿ ಅವರು ನಗದು ರೂ. 13,000 ಮತ್ತು ರೂ. 7,000 ಬೆಲೆಯುಳ್ಳ ಸರಕುಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿರುತ್ತಾರೆ. ಆ ವರ್ಷದಲ್ಲಿ ದಿನಾಂಕ 01. 04. 2009 ರಂದು ರೂ. 12,000 ಗಳನ್ನು ಹೆಚ್ಚುವರಿ ಬಂಡವಾಳವನ್ನು ತೊಡಗಿಸುತ್ತಾರೆ.

*ಹೊಂದಾಣಿಕೆಗಳು :*

a) ಸಾಲಗಾರರ ಮೇಲೆ ಶೇಕಡ 5 ರಷ್ಟು ಕರಡು ಸಾಲ ತೆಗೆದಿರಿಸಬೇಕು.

b) ಬಂಡವಾಳದ ಮೇಲೆ ಶೇಕಡ 12 ರಂತೆ ಬಡ್ಡಿಯನ್ನು ನೀಡಿ.

c) ಯಂತ್ರೋಪಕರಣಗಳ ಮೇಲೆ ಶೇಕಡ 10 ರಷ್ಟು ಮತ್ತು ಪೀಠೋಪಕರಣಗಳ ಮೇಲೆ ಶೇಕಡ 5 ರಷ್ಟು ಸವಕಳಿಗಳನ್ನು ತೆಗೆಯಿರಿ.

d) ಕಟ್ಟಡದ ಮೇಲೆ ಶೇಕಡ 20 ರಷ್ಟು ಹೆಚ್ಚಿಸಿ.

e) ಕೊಡಬೇಕಾದ ಸಂಬಳ ರೂ. 1,000 ಮತ್ತು ಬರಬೇಕಾದ ದಳ್ಳಾಳಿ ರೂ. 2,000.

*ತಯಾರಿಸಿ :*

i) ವ್ಯವಹಾರದ ಸ್ಥಿತಿ ಪಟ್ಟಿ

ii) ಲಾಭ-ನಷ್ಟ ಪಟ್ಟಿ

iii) ಪುನರ್ವಿಮರ್ಶಿತ ಸ್ಥಿತಿ ಪಟ್ಟಿ

17. ಮದನ್, ಮೋಹನ್ ಮತ್ತು ಮೂರ್ತಿ ಇವರು ವ್ಯವಹಾರದಲ್ಲಿ ಪಾಲುಗಾರರಾಗಿದ್ದು, $\frac{2}{5}$, $\frac{2}{5}$ ಮತ್ತು $\frac{1}{5}$ ರ ಪ್ರಮಾಣದಲ್ಲಿ ಲಾಭ-ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದರು. ದಿನಾಂಕ 31. 03. 2009 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

*ದಿನಾಂಕ* **31. 03. 2009** *ರ ಅಢಾವೆ ಪತ್ರಿಕೆ*

| *ಹೊಣೆಗಾರಿಕೆಗಳು* | | *ರೂ.* | *ಆಸ್ತಿಗಳು* | | *ರೂ.* |
|---|---|---|---|---|---|
| ಸಾಹುಕಾರರು | | 30,000 | ನಗದು | | 14,500 |
| ಕೊಡತಕ್ಕ ಹುಂಡಿ | | 15,000 | ಸಾಲಗಾರರು | 30,000 | |
| ಕಾಯ್ದಿಟ್ಟ ನಿಧಿ | | 30,000 | ( – ) ಮೀಸಲು | 1,500 | 28,500 |
| ಲಾಭ-ನಷ್ಟ ಖಾತೆ | | 10,000 | ದಾಸ್ತಾನು | | 45,000 |
| *ಬಂಡವಾಳಗಳು :* | | | ಯಂತ್ರೋಪಕರಣ | | 60,000 |
| ಮದನ್ | 60,000 | | ಮೋಟಾರು ವಾಹನ | | 12,000 |
| ಮೋಹನ್ | 45,000 | | ಕಟ್ಟಡ | | 60,000 |
| ಮೂರ್ತಿ | 30,000 | 1,35,000 | | | |
| | | **2,20,000** | | | **2,20,000** |

ಪಾಲುಗಾರ ಮೋಹನ್ ಮೇಲೆ ತಿಳಿಸಿದ ದಿನಾಂಕದಂದು ಈ ಕೆಳಗಿನ ಕರಾರುಗಳಂತೆ ಸಂಸ್ಥೆಯಿಂದ ನಿವೃತ್ತಿ ಹೊಂದಿದನು :

a) ಯಂತ್ರೋಪಕರಣಗಳ ಮೇಲೆ ಶೇಕಡ 10 ರಂತೆ ಮತ್ತು ಮೋಟಾರು ವಾಹನದ ಮೇಲೆ ಶೇಕಡ 15 ರಂತೆ ಸವಕಳಿ ಕೊಡಬೇಕು.

b) ದಾಸ್ತಾನಿನ ಮೇಲೆ ಶೇಕಡ 20 ರಂತೆ ಮತ್ತು ಕಟ್ಟಡದ ಮೇಲೆ ಶೇಕಡ 10 ರಂತೆ ಮೌಲ್ಯವನ್ನು ಹೆಚ್ಚಿಸಬೇಕು.

c) ಸಂಶಯಾಸ್ಪದ ಸಾಲಗಳ ಮೀಸಲನ್ನು ರೂ. 1,200 ರಷ್ಟು ಹೆಚ್ಚಿಸಬೇಕು.

d) ಸಂಸ್ಥೆಯ ಕೀರ್ತಿಮೌಲ್ಯ ರೂ. 36,000 ಎಂದು ಮೌಲ್ಯೀಕರಿಸಿ, ಅದನ್ನು ಮುಂದುವರಿಯುವ ಪಾಲುಗಾರರ ಅಢಾವೆ ಪತ್ರಿಕೆಯಲ್ಲಿ ದಾಖಲಿಸಬೇಕು.

*ತಯಾರಿಸಿ :*

i) ಪುನರ್ಮೌಲ್ಯ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ಮುಂದುವರಿಯುವ ಪಾಲುಗಾರರ ಅಢಾವೆ ಪತ್ರಿಕೆ

18. ಕಾವ್ಯ, ಕವಿತ ಮತ್ತು ಕರಿಷ್ಮ ಪಾಲುಗಾರರಾಗಿದ್ದು ಲಾಭ-ನಷ್ಟಗಳನ್ನು 3 : 2 : 1 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 31. 12. 2007 ರಂದು ಅವರು ತಮ್ಮ ಸಂಸ್ಥೆಯನ್ನು ವಿಸರ್ಜಿಸಲು ಒಪ್ಪಿಕೊಳ್ಳುತ್ತಾರೆ. ಆ ದಿನದಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

***ದಿನಾಂಕ* 31. 12. 2007 *ರ ಅಢಾವೆ ಪತ್ರಿಕೆ***

| *ಹೊಣೆಗಾರಿಕೆಗಳು* | | ರೂ. | *ಆಸ್ತಿಗಳು* | ರೂ. |
|---|---|---|---|---|
| ಸಾಹುಕಾರರು | | 60,000 | ಬ್ಯಾಂಕಿನಲ್ಲಿರುವ ನಗದು | 30,000 |
| ಕೊಡತಕ್ಕ ಹುಂಡಿ | | 18,000 | ಬರತಕ್ಕ ಹುಂಡಿ | 24,000 |
| ಕಾವ್ಯಳ ಸಾಲ | | 40,000 | ದಾಸ್ತಾನು | 40,000 |
| ಕಾಯ್ದಿಟ್ಟ ನಿಧಿ | | 36,000 | ಸಾಲಗಾರರು | 80,000 |
| *ಬಂಡವಾಳಗಳು :* | | | ಮೋಟಾರು ಕಾರು | 20,000 |
| ಕಾವ್ಯ | 90,000 | | ಹೂಡಿಕೆಗಳು | 30,000 |
| ಕವಿತ | 60,000 | | ಪೀಠೋಪಕರಣ | 26,000 |
| ಕರಿಷ್ಮ | 30,000 | 1,80,000 | ಯಂತ್ರೋಪಕರಣ | 60,000 |
| | | | ಲಾಭ-ನಷ್ಟ ಖಾತೆ | 24,000 |
| | | **3,34,000** | | **3,34,000** |

ಆಸ್ತಿಗಳ ವಿಲೇವಾರಿ ಈ ಕೆಳಗಿನಂತೆ ಮಾಡಿದರು :

a) ದಾಸ್ತಾನು ರೂ. 44,000, ಸಾಲಗಾರರು ರೂ. 90,000, ಯಂತ್ರೋಪಕರಣ ರೂ. 56,000 ಮತ್ತು ಬರತಕ್ಕ ಹುಂಡಿಗಳು ರೂ. 20,000.

b) ಪೀಠೋಪಕರಣವನ್ನು ಕಾವ್ಯ ರೂ. 30,000 ಕ್ಕೆ ತೆಗೆದುಕೊಂಡಳು, ಹೂಡಿಕೆಗಳನ್ನು ಕವಿತ ರೂ. 40,000 ಕ್ಕೆ ತೆಗೆದುಕೊಂಡಳು ಮತ್ತು ಕರಿಷ್ಮ ಮೋಟಾರು ಕಾರನ್ನು ರೂ. 14,600 ಗಳಿಗೆ ತೆಗೆದುಕೊಂಡಳು.

c) ಸಾಹುಕಾರರಿಗೆ ಮತ್ತು ಕೊಡತಕ್ಕ ಹುಂಡಿಗಳಿಗೆ ಹಣ ಪಾವತಿ ಮಾಡಿದಾಗ ಶೇಕಡಾ 10 ರಷ್ಟು ಸೋಡಿ (ರಿಯಾಯ್ತಿ) ಪಾವತಿಯಾಗಿದೆ.

d) ವಿಲೇವಾರಿ ವೆಚ್ಚ ರೂ. 8,000 ಆಗಿರುತ್ತದೆ.

*ತಯಾರಿಸಿ :*

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ಬ್ಯಾಂಕು ಖಾತೆ

19. ದಿನಾಂಕ 01. 01. 2006 ರಂದು ಸಂಸ್ಥೆ ಒಂದು ಆಸ್ತಿಯನ್ನು ರೂ. 50,000 ಗಳಿಗೆ 4 ವರ್ಷಗಳ ಅವಧಿಗೆ ಗುತ್ತಿಗೆಯಾಗಿ ಖರೀದಿಸಿತು. ಈ ಗುತ್ತಿಗೆ ಪಡೆದ ಆಸ್ತಿಯ ಮೇಲೆ ಶೇಕಡ 6 ರ ಬಡ್ಡಿ ಸಹಿತವಾಗಿ ವರ್ಷಾಸನ ಪದ್ಧತಿಯಲ್ಲಿ ಸವಕಳಿಯನ್ನು ತೆಗೆಯಲು ನಿರ್ಧರಿಸಿತು. ವರ್ಷಾಸನ ಕೋಷ್ಟಕದಂತೆ ರೂ. 1 ನ್ನು ಶೇಕಡ 6 ರ ಬಡ್ಡಿ ಸಹಿತ 4 ವರ್ಷದ ಅವಧಿಗೆ ರೂ. 0·288591 ರಂತೆ ಸವಕಳಿ ತೆಗೆಯಬೇಕು.

ಗುತ್ತಿಗೆ ಆಸ್ತಿಯ ಖಾತೆ ಮತ್ತು ಬಡ್ಡಿ ಖಾತೆಯನ್ನು ಎಲ್ಲಾ ನಾಲ್ಕು ವರ್ಷಗಳಿಗೆ ತಯಾರಿಸಿ.

[ Turn over

20. ದಿನಾಂಕ 31. 03. 2010 ರ ಪ್ರಜಾ ನಿಯಮಿತ ಕಂಪನಿ, ಇದರ ತಾಳೆ ಪಟ್ಟಿ ಈ ಕೆಳಗಿನಂತೆ ಇದೆ :

**ದಿನಾಂಕ 31. 03. 2010 ರ ತಾಳೆ ಪಟ್ಟಿ**

| ಕ್ರಮ ಸಂಖ್ಯೆ | ವಿವರಗಳು | ಖರ್ಚು ರೂ. | ಜಮಾ ರೂ. |
|---|---|---|---|
| 1. | ಶೇರು ಬಂಡವಾಳ (ರೂ. 100 ರ 2400 ಶೇರುಗಳು) | — | 2,40,000 |
| 2. | ಕಾಯ್ದಿಟ್ಟ ನಿಧಿ | — | 15,200 |
| 3. | ದಾಸ್ತಾನು ( 01. 04. 2009 ರಂತೆ ) | 32,000 | — |
| 4. | ಖರೀದಿ ಮತ್ತು ಮಾರಾಟ | 1,20,000 | 2,80,000 |
| 5. | ವಾಪಸಾತಿಗಳು ( Returns ) | 8,000 | 6,000 |
| 6. | ಕೂಲಿ | 34,000 | — |
| 7. | ಸಾಗಾಣಿಕೆ ವೆಚ್ಚ | 8,000 | — |
| 8. | ಸಂಬಳ | 24,000 | — |
| 9. | ಇತರ ವೆಚ್ಚಗಳು | 24,000 | — |
| 10. | ಸೋಡಿ (ರಿಯಾಯ್ತಿ) | 10,000 | 6,000 |
| 11. | ಬರತಕ್ಕ ಹುಂಡಿ | 4,000 | — |
| 12. | ಸಾಲಗಾರರು ಮತ್ತು ಸಾಹುಕಾರರು | 56,000 | 22,800 |
| 13. | ಭೂಮಿ ಮತ್ತು ಕಟ್ಟಡ | 80,000 | — |
| 14. | ಪೂರ್ವಭಾವಿ ವೆಚ್ಚಗಳು | 29,600 | — |
| 15. | ಯಂತ್ರೋಪಕರಣ | 32,000 | — |
| 16. | ಪೀಠೋಪಕರಣ | 46,000 | — |
| 17. | ಹೂಡಿಕೆಗಳು | 36,000 | — |
| 18. | ಕೈಯಲ್ಲಿರುವ ನಗದು | 18,400 | — |
| 19. | ಬ್ಯಾಂಕಿನಲ್ಲಿರುವ ನಗದು | 24,000 | — |
| 20. | ಬಿಡಿ ಭಾಗಗಳು | 40,000 | — |
| 21. | ಕೀರ್ತಿಮೌಲ್ಯ | 40,000 | — |
| 22. | ಸಾಲ | — | 4,000 |
| 23. | ಲಾಭ-ನಷ್ಟ ವಿನಿಯೋಗ ಖಾತೆ | — | 16,000 |
| 24. | ಸಾಲ ಪತ್ರಗಳು | — | 40,000 |
| | ಒಟ್ಟು | **6,66,000** | **6,66,000** |

*ಹೊಂದಾಣಿಕೆಗಳು :*

a) ಅಂತಿಮ ದಾಸ್ತಾನು ರೂ. 48,000.

b) ಯಂತ್ರೋಪಕರಣದ ಮೇಲೆ ಶೇಕಡ 5 ರಂತೆ ಸವಕಳಿ ತೆಗೆಯಿರಿ.

c) ರೂ. 4,800 ರಷ್ಟು ಕರಡು ಸಾಲವನ್ನು ತೊಡೆದುಹಾಕಿ.

d) ಪೂರ್ವಭಾವಿ ವೆಚ್ಚಗಳಲ್ಲಿ ರೂ. 13,600 ರಷ್ಟು ತೊಡೆದುಹಾಕಿ.

e) ಲಾಭಾಂಶಕ್ಕಾಗಿ ರೂ. 28,000 ರಷ್ಟು ಮೀಸಲಿರಿಸಿ.

f) ಕಾಯ್ದಿಟ್ಟ ನಿಧಿಗೆ ರೂ. 4,000 ಗಳನ್ನು ವರ್ಗಾಯಿಸಿ.

ಕಂಪನಿಯ ಕಾನೂನಿನಂತೆ ಅಂತಿಮ ಲೆಕ್ಕಗಳನ್ನು ತಯಾರಿಸಿ.

21. ಈ ಕೆಳಗಿನ ಪ್ರಾರಂಭಿಕ ಆಢಾವೆ ಪತ್ರಿಕೆ ಹಾಗೂ ಸ್ವೀಕೃತಿ-ಪಾವತಿ ಖಾತೆಗಳು, ಲಯನ್ಸ್ ಕ್ಲಬ್, ಬಳ್ಳಾರಿ ಇವರಿಗೆ ಸಂಬಂಧಪಟ್ಟಿದೆ :

**ದಿನಾಂಕ 31. 12. 2007 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಬಂಡವಾಳ ನಿಧಿ | 1,50,000 | ಕಟ್ಟಡ | 1,35,000 |
| 2008 ರ ವಂತಿಗೆ | 15,000 | ಪೀಠೋಪಕರಣ | 45,000 |
| ಬಾಕಿಯಲ್ಲಿರುವ ಕಛೇರಿ ವೆಚ್ಚಗಳು | 6,000 | ಕ್ರೀಡಾ ಸಾಮಗ್ರಿಗಳು | 30,000 |
| ಬ್ಯಾಂಕಿನ ಸಾಲ | 69,000 | ಬಾಕಿ ಇರುವ ವಂತಿಗೆ | 15,000 |
| | | ಬಾಕಿ ಇರುವ ಬಾಡಿಗೆ | 6,000 |
| | | ನಗದು | 9,000 |
| | **2,40,000** | | **2,40,000** |

**ದಿನಾಂಕ 31. 12. 2008 ಕ್ಕೆ ಕೊನೆಗೊಳ್ಳುವ ಸ್ವೀಕೃತಿ-ಪಾವತಿ ಖಾತೆ**

| ಸ್ವೀಕೃತಿ | ರೂ. | ಪಾವತಿ | ರೂ. |
|---|---|---|---|
| ಗೆ ನಗದು 01. 01. 2008 ರಂದು | 9,000 | ಯಿಂದ ಕಛೇರಿ ವೆಚ್ಚ " 2007 ರೂ. 6,000 " 2008 ರೂ. 24,000 | 30,000 |
| " ವಂತಿಕೆಗಳು : 2007 ರೂ. 15,000 2008 ರೂ. 45,000 2009 ರೂ. 6,000 | 66,000 | " ಸಂಬಳ | 36,000 |
| | | " ವೃತ್ತಪತ್ರಿಕೆಗಳ ಖರೀದಿ | 9,000 |
| | | " ಪಾವತಿಸಿದ ಬ್ಯಾಂಕಿನ ಸಾಲ | 39,000 |
| " ಪ್ರವೇಶ ಶುಲ್ಕ | 15,000 | " ಕ್ರೀಡಾ ಸಾಮಗ್ರಿಗಳು | 15,000 |
| " ಬಾಡಿಗೆ | 30,000 | " ನಗದು ಬಾಕಿ (31. 12. 2008) | 6,000 |
| " ಹಳೆಯ ವೃತ್ತಪತ್ರಿಕೆ ಮಾರಾಟದಿಂದ | 3,000 | | |
| " ದೇಣಿಗೆಗಳು | 12,000 | | |
| | **1,35,000** | | **1,35,000** |

*ಹೊಂದಾಣಿಕೆಗಳು :*

a) ಚಾಲ್ತಿ ವರ್ಷಕ್ಕೆ ಬರಬೇಕಾದ ವಂತಿಗೆ ರೂ. 9,000.

b) ಸಂಬಳ ಕೊಡಬೇಕಾದದ್ದು ಬಾಕಿ ರೂ. 3,000.

c) ಕ್ರೀಡಾ ಸಾಮಗ್ರಿಗಳ ಮೇಲೆ ಸವಕಳಿ ರೂ. 6,000 ತೆಗೆಯಿರಿ.

d) $\frac{1}{2}$ ದೇಣಿಗೆಯನ್ನು ಮತ್ತು ಪೂರ್ತಿ ಪ್ರವೇಶ ಶುಲ್ಕವನ್ನು ಬಂಡವಾಳ ನಿಧಿಗೆ ವರ್ಗಾಯಿಸಿ.

e) ಕಟ್ಟಡದ ಮೌಲ್ಯವನ್ನು ರೂ. 15,000 ರಷ್ಟು ಹೆಚ್ಚಿಸಿ.

*ತಯಾರಿಸಿ :*

i) ಆಯ-ವ್ಯಯ ಖಾತೆ

ii) ದಿನಾಂಕ 31. 12. 2008 ರಂದು ಇರುವಂತೆ ಆಢಾವೆ ಪತ್ರಿಕೆ

[ Turn over

## ಭಾಗ – D

*( ಪ್ರಾಯೋಗಿಕ ಪ್ರಶ್ನೆಗಳು )*

ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು : $2 \times 5 = 10$

22. ಐದು ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ಇಬ್ಬರು ಪಾಲುಗಾರರ ಬಂಡವಾಳಗಳನ್ನು ಬದಲಾಗುವ ಬಂಡವಾಳದ ಪದ್ಧತಿ ಪ್ರಕಾರ ತಯಾರಿಸಿ.

23. ಎರಡು ವಾರ್ಷಿಕ ಸಮನಾದ ಕಂತುಗಳ ಮೂಲಕ ಬಡ್ಡಿ ಸಹಿತ ಕೊನೆಗೊಳ್ಳುವಂತೆ ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ವಾರಸುದಾರನ ಸಾಲ ಖಾತೆಯನ್ನು ತಯಾರಿಸಿ.

24. ಈ ಕೆಳಗಿನವುಗಳನ್ನು ಬಂಡವಾಳ ಮತ್ತು ಕಂದಾಯವಾಗಿ ವಿಂಗಡಿಸಿ :

a) ಕ್ರೀಡಾ ಸಾಮಗ್ರಿಗಳ ಮಾರಾಟ

b) ಕಛೇರಿ ಉಪಯೋಗಕ್ಕಾಗಿ ಗಣಕ ಯಂತ್ರದ ಖರೀದಿ

c) ಹಳೆ ವಾರ್ತಾಪತ್ರಿಕೆಗಳ ಮತ್ತು ನಿಯತಕಾಲಿಕೆಗಳ ಮಾರಾಟ

d) ಸಹಾಯಾರ್ಥ ಪ್ರದರ್ಶನದ ವೆಚ್ಚಗಳು

e) ಹಾಸ್ಪಿಟಲ್‌ನವರು ವೈದ್ಯರಿಗೆ (ಸರ್ಜನ್) ನೀಡಿದ ಗೌರವ ಧನ

**( English Version )**

## SECTION – A

Answer any *eight* questions, each carrying *two* marks. $8 \times 2 = 16$

1. State any two differences between Statement of Affairs and Balance Sheet.
2. What is partnership deed ?
3. Give Journal entry for transferring profit on Revaluation Account in admission of a partner.
4. Why is Realisation Account prepared ?
5. What are calls-in-advance ?
6. State any two items which are shown under the heading 'Fixed Assets'.
7. What is depreciation ?
8. Give the meaning of capital expenditure.
9. What is payroll accounting ?
10. What is database system ?

## SECTION – B

Answer any *three* questions, each carrying *six* marks. $3 \times 6 = 18$

11. On 1. 1. 2010 Krishna and Balarama entered into partnership contributing capitals of Rs. 1,00,000 and Rs. 75,000 respectively and sharing profits and losses in the ratio of 3 : 2. Balarama is to be allowed a salary of Rs. 20,000 per annum. Interest on capitals is to be allowed at 5% PA and 6% PA interest is to be charged on drawings. During the year, Krishna withdrew Rs. 15,000 and Balarama withdrew Rs. 18,000 for personal use, interest on drawings being Rs. 350 and Rs. 250 respectively. During the year, they earned a profit of Rs. 52,900 before noting the above adjustments.

    Prepare Profit & Loss Appropriation A/c.

[ Turn over

12. Uma and Suma are partners sharing profits and losses in the proportion of 3 : 2 respectively. They agree to admit Rashmi as a new partner. Future profits and losses are to be shared between all partners in the proportion of 8 : 7 : 5 respectively.

Find out the sacrifice ratio of old partners.

13. Black, White and Red are partners sharing profits and losses in the ratio of 2 : 2 : 1. Their Balance Sheet as on 31. 12. 2009 was as under :

**Balance Sheet as on 31. 12. 2009**

| Liabilities | | Rs. | Assets | Rs. |
|---|---|---|---|---|
| Creditors | | 60,000 | Cash | 15,000 |
| Bills Payable | | 30,000 | Stock | 45,000 |
| Reserve fund | | 60,000 | Debtors | 60,000 |
| Capitals : | | | Furniture | 30,000 |
| Black | 60,000 | | Buildings | 1.50,000 |
| White | 60,000 | | | |
| Red | 30,000 | 1,50,000 | | |
| | | 3,00,000 | | 3,00,000 |

Black died on 01. 07. 2010. His executors were entitled to the following :

a) His capital as on the date of death

b) His share of reserve fund.

c) His share of Goodwill is Goodwill of the firm is valued at Rs. 1,50,000

d) Interest on capital at 9% PA

e) Profit till the date of death based on the previous year profit. The profit for the year 2009 was Rs. 75,000

Prepare Black's capital account.

14. On 01. 01. 2008 the directors of Balaji Company Limited forfeited 600 equity shares of Rs. 100 each for non-payment of first call money of Rs. 25 per share and final call money of Rs. 15 per share.

On 01. 02. 2008, they were reissued the same at Rs. 88 per share as fully paid up.

Write the necessary Journal entries.

15. Write any *six* differences between manual accounting and computerised accounting.

## SECTION – C

Answer any *four* from the following questions, each carrying *fourteen* marks : 4 × 14 = 56

16. Sri Bharath kept his books under single entry system. He provides the following information :

| Particulars | As on 01. 01. 2009 Rs. | As on 31. 12. 2009 Rs. |
|---|---|---|
| Cash | 10,000 | 16,000 |
| Bank overdraft | 20,000 | 14,000 |
| Bills receivable | 16,000 | 20,000 |
| Debtors | 30,000 | 40,000 |
| Stock | 24,000 | 28,000 |
| Furniture | 20,000 | 20,000 |
| Machinery | 30,000 | 30,000 |
| Bill payable | 6,000 | 10,000 |
| Creditors | 14,000 | 16,000 |
| Buildings | 50,000 | 50,000 |

During the year he has withdrawn cash Rs. 13,000 and goods worth Rs. 7,000 for his personal use. He has also introduced Rs. 12,000 as an additional capital on 01. 04. 2009.

*Adjustments* :

a) Reserve 5% on debtors for bad debts

b) Allow interest on capital at 12% P.A.

c) Depreciate machinery by 10% P.A. and furniture by 5% P.A.

d) Appreciate buildings by 20% P.A.

e) Salary payable Rs. 1,000 and commission receivable Rs. 2,000.

*Prepare* :

i) Statement of affairs

ii) Statement of profit or loss

iii) Revised statement of affairs.

17. Madan, Mohan and Murthy were partners in a firm sharing profits and losses in the ratio of $\frac{2}{5}, \frac{2}{5}$ and $\frac{1}{5}$ respectively. The following was their Balance Sheet as on 31. 03. 2009 :

**Balance Sheet as on 31. 03. 2009**

| Liabilities | | Rs. | Assets | | Rs. |
|---|---|---|---|---|---|
| Creditors | | 30,000 | Cash | | 14,500 |
| Bills payable | | 15,000 | Debtors | Rs. 30,000 | |
| Reserve fund | | 30,000 | ( – ) Reserve | Rs. 1,500 | 28,500 |
| Profit & Loss A/c. | | 10,000 | Stock | | 45,000 |
| Capitals : | | | Machinery | | 60,000 |
| Madan | Rs. 60,000 | | Motor van | | 12,000 |
| Mohan | Rs. 45,000 | | Buildings | | 60,000 |
| Murthy | Rs. 30,000 | 1,35,000 | | | |
| | | 2,20,000 | | | 2,20,000 |

Mohan retires on the above date subject to the following adjustments :

a) Machinery is to be depreciated by 10% and Motor vans by 15%

b) Stock is to be appreciated by 20% and Buildings by 10%

c) Provision for doubtful debts is to be increased by Rs. 1,200

d) Goodwill of the firm is to be valued at Rs. 36,000 and is to be shown in the Balance Sheet of the continuing partners.

*Prepare* :

i) Revaluation Account

ii) Partners' Capital Accounts

iii) Balance Sheet of continuing partners.

18. Kavya, Kavitha and Karishma are partners sharing profits and losses in the ratio of 3 : 2 : 1. They agreed to dissolve their firm as on 31. 12. 2007 on which date the Balance Sheet was as follows :

**Balance Sheet as on 31. 12. 2007**

| Liabilities | | Rs. | Assets | Rs. |
|---|---|---|---|---|
| Creditors | | 60,000 | Cash at Bank | 30,000 |
| Bills Payable | | 18,000 | Bill receivable | 24,000 |
| Kavya's loan | | 40,000 | Stock | 40,000 |
| Reserve Fund | | 36,000 | Debtors | 80,000 |
| Capitals : | | | Motor car | 20,000 |
| Kavya | Rs. 90,000 | | Investments | 30,000 |
| Kavitha | Rs. 60,000 | | Furniture | 26,000 |
| Karishma | Rs. 30,000 | 1,80,000 | Machinery | 60,000 |
| | | | Profit & Loss A/c. | 24,000 |
| | | 3,34,000 | | 3,34,000 |

a) Assets realised as follows :

Stock Rs. 44,000, Debtors Rs. 90,000, Machinery Rs. 56,000 and B/R. Rs. 20,000.

b) Furniture is taken over by Kavya at Rs. 30,000, Kavitha took over investments at Rs. 40,000 and Karishma took over Motor car at Rs. 14,600.

c) Creditors and Bills payable paid off at 10% discount.

d) Realisation expenses amounted to Rs 8,000.

*Prepare* :

i) Realisation Account

ii) Partners' capital accounts

iii) Bank Account.

19. On 01. 01. 2006 a firm acquired a lease costing Rs. 50,000 for a term of 4 years. It was proposed to depreciate it on the annuity method charging interest at 6% per annum. With reference to the annuity table, to write off Re. 1 at 6% over a period of 4 years the amount to be charged is 0·288591.

Show Lease account and Interest account for all four years.

[ Turn over

20. Following is the Trial Balance of Praja Company Limited as on 31. C3. 2010 :

**Trial Balance as on 31. 03. 2010**

| Sl. No. | Particulars | Debit Rs. | Credit Rs. |
|---|---|---|---|
| 1. | Share capital ( 2400 shares of Rs. 100 each ) | — | 2,40,000 |
| 2. | Reserve fund | — | 15,200 |
| 3. | Stock ( 01. 04. 2009 ) | 32,000 | — |
| 4. | Purchases and Sales | 1,20,000 | 2,80,000 |
| 5. | Returns | 8,000 | 6,000 |
| 6. | Wages | 34,000 | — |
| 7. | Freight | 8,000 | — |
| 8. | Salaries | 24,000 | — |
| 9. | Sundry expenses | 24,000 | — |
| 10. | Discounts | 10,000 | 6,000 |
| 11. | Bill receivable | 4,000 | — |
| 12. | Debtors and Creditors | 56,000 | 22,800 |
| 13. | Land and Buildings | 80,000 | — |
| 14. | Preliminary expenses | 29,600 | — |
| 15. | Machinery | 32,000 | — |
| 16. | Furniture | 46,000 | — |
| 17. | Investments | 36,000 | — |
| 18. | Cash in hand | 18,400 | — |
| 19. | Cash at Bank | 24,000 | — |
| 20. | Loose Tools | 40,000 | — |
| 21. | Goodwill | 40,000 | — |
| 22. | Loan | — | 40,000 |
| 23. | Profit & Loss appropriation A/c. | — | 16,000 |
| 24. | Debentures | — | 40,000 |
| | Total | 6,66,000 | 6,66,000 |

*Adjustments* :

a) Closing stock Rs. 48,000

b) Depreciate machinery at 5% P.A.

c) Write off Rs. 4,800 as bad debts

d) Write off Rs. 13,600 from prelilminary expenses

e) Provide for dividend Rs. 28,000

f) Transfer Rs. 4,000 to Reserve fund.

Prepare Final accounts of the company is statutory form.

21. Following is the opening Balance Sheet and Receipts and Payments are related to Lions Club, Bellary :

**Opening Balance Sheet as on 31. 12. 2007**

| Liabilities | Rs. | Assets | Rs. |
|---|---|---|---|
| Capital fund | 1,50,000 | Buildings | 1,35,000 |
| Subscription for 2008 | 15,000 | Furniture | 45,000 |
| O/S Office expenses | 6,000 | Sports materials | 30,000 |
| Bank loan | 69,000 | O/S Subscription | 15,000 |
| | | O/S Rent | 6,000 |
| | | Cash | 9,000 |
| | 2,40,000 | | 2,40,000 |

**Receipts and Payments A/c for the year ended 31. 12. 2008**

| Receipts | Rs. | Payments | Rs. |
|---|---|---|---|
| To Cash Balance as on 01. 01. 2008 | 9,000 | By Office expenses | |
| " Subscriptions | | 2007 — 6,000 | |
| 2007 — 15,000 | | 2008 — 24,000 | 30,000 |
| 2008 — 45,000 | | " Salary | 36,000 |
| 2009 — 6,000 | 66,000 | " Subscriptions to newspapers | 9,000 |
| " Entrance fee | 15,000 | " Bank loan paid | 39,000 |
| " Rent | 30,000 | | |
| " Sale of old newspapers | 3,000 | " Sports materials | 15,000 |
| " Donations | 12,000 | " Cash balance as on 31. 12. 2008 | 6,000 |
| | 1,35,000 | | 1,35,000 |

*Adjustments* :

a) Subscriptions O/S for current year Rs. 9,000

b) Salary outstanding Rs. 3,000

c) Depreciate sports materials by Rs. 6,000

d) Half of the donations and entire entrance fee are to be capitalised.

e) Appreciate buildings by Rs. 15,000

Prepare :

i) Income and Expenditure Account

ii) Balance sheet as on 31. 12. 2008.

## SECTION – D

### ( Practical Oriented Questions )

Answer any *two* of the following questions. Each question carries *five* marks : $2 \times 5 = 10$

22. Prepare Capital accounts of two partners under fluctuating capital system with five imaginary figures.

23. Prepare an Executor's loan account with imaginary figures, assuming that his account would be settled in two annual equal instalments along with interest.

24. Classify the following items into Capital and Revenue :

    a) Sale of sports materials

    b) Purchase of computer for office use

    c) Sale of old newspapers and periodicals

    d) Benefit show expenses

    e) Honourarium paid to a surgeon by a hospital.